

ತವರಿಗೆ ಹೊರಟಳೋ ಮ್ಯಾಟರ್ ಸೀರಿಯಸ್ ಆಗಿದೆ ಎಂದರ್ಥ.

ಹೆಂಡತಿಗೇನೋ ಜಗಳವಾದಾಗ ಹೋಗಲು ತವರಿದೆ. (ಶ್ರೀಮನ್ನಾರಾಯಣನು ಸಿಡುಕಿದ ಲಕ್ಷ್ಮಿಯನ್ನು ಸಮಾಧಾನಪಡಿಸಲು ಹಿಂಬಾಲಿಸಿಕೊಂಡು ಹೋದನಂತೆ. ಇಲ್ಲಿನ ಗಂಡಂದಿರು ತಮ್ಮ ತಮ್ಮ ಹೆಂಡಂದಿರನ್ನು ಹಿಂಬಾಲಿಸಿಕೊಂಡು ಹೋದರೆ ಓಕೆ) ಆದರೆ ಗಂಡ ಎಲ್ಲಿಗೆ ಹೋಗ್ತಾನೆ? ಎಂಬ ಪ್ರಶ್ನೆ ಮೂಡಬಹುದು. ಅವನಿಗೆ ಹೋಗಲು ತವರು ಮನೆಯಿಲ್ಲ ಎಂದುಕೊಳ್ಳುತ್ತೀರಾ? ಯೋಗರಾಜಭಟ್ಟರ ಪ್ರಕಾರ ಅವನಿಗೂ ಒಂದು ತವರುಮನೆಯಿದೆ. ಅದೇ 'ನಿಜವಾಗಲೂ ಬಾರು ಗಂಡ್‌ಮಕ್ಕಳ ತವರು'. ಆದರೆ ಕುಡಿಯದಿರುವವರು? ಮನೆಯನ್ನೇ ತವರನ್ನಾಗಿಸಿಕೊಂಡಿರಬಹುದೇ?

ಈಗಿನ ಕಾಲದಲ್ಲಿ ಗಂಡ ಹೆಂಡತಿ ಜಗಳಕ್ಕೆ ಕಾರಣ ಬೇರೆಯಿದೆ. ಗಂಡ 'ಸಮಯಕ್ಕೆ ಸರಿಯಾಗಿ ಅಡುಗೆ ಮಾಡುವುದಿಲ್ಲ. ಇಡೀ ದಿನ ಮೊಬೈಲ್ ನೋಡ್ತಾ ಇರ್ತಾಳೆ' ಎಂದು ದೂರಿದರೆ, ಹೆಂಡತಿ 'ಇಡೀ ದಿನ ಮೊಬೈಲ್ ನೋಡ್ತಾ ಇರ್ತಾರೆ, ಮಗುವನ್ನು ನೋಡ್ಕೋಬಾರ್ದಾ?' ಅಂತಾಳೆ. ಹೀಗಾಗಿ ಗಂಡಹೆಂಡತಿಗೆ ಈಗ ಫೇಸ್‌ಬುಕ್, ಇನ್ಸ್ಟಾ ವಿಲನ್ ಆಗಿದೆ. 'ಗಂಡ ಹೆಂಡತಿ ಜಗಳ ಉಂಡು ಮಲಗುವವರೆಗೆ' ಅನ್ನೋ ಬದಲು 'ಗಂಡ ಹೆಂಡತಿ ಜಗಳ ಬ್ಲಾಕ್ ಮಾಡುವವರೆಗೆ', 'ಅನ್‌ಫಾಲೋ ಮಾಡುವವರೆಗೆ', 'ಅನ್‌ಫ್ರೆಂಡ್ ಮಾಡೋವರೆಗೆ', 'ವೈಫೈ ಡಿಸ್‌ಕನೆಕ್ಟ್ ಆಗೋವರೆಗೆ' ಎಂದು ಬದಲಾಯಿಸಿಕೊಳ್ಳಬಹುದು. ಹೀಗಾಗಿ ಯಾರಾದರೂ ಸಿನಿಮಾ ತೆಗೆಯುವವರು 'ಗಂಡ ಹೆಂಡತಿ ಮತ್ತು ಅವನು' ಎಂಬ ಸಿನಿಮಾದ ಬದಲಿಗೆ ಈಗ 'ಗಂಡ ಹೆಂಡತಿ ಮತ್ತು ಫೇಸ್ಬುಕ್' ಎಂದು ಟೈಟಲ್ ಇಟ್ಟರೆ ಬೇಕಾದಷ್ಟು ಕಂಟೆಂಟ್ ಸಿಗುತ್ತದೆ.

ದೇವಲೋಕದಲ್ಲಿ ಲಕ್ಷ್ಮಿ ನಾರಾಯಣರ ಜಗಳ ವರ್ಲ್ಡ್ ಫೇಮಸ್. ಬಾಲ್ಯದಲ್ಲಿ ಅಣ್ಣತಮ್ಮಂದಿರು ಆಡುವ ಜಗಳಕ್ಕೆ ಕಾರ್ತಿಕೇಯ, ಗಣೇಶರೂ; ಒಡಹುಟ್ಟಿದವರ ಜಗಳಕ್ಕೆ ಪಾಂಡವ ಕೌರವರು ಸಾಕ್ಷಿ. ಅದಕ್ಕೆ 'ಹುಟ್ಟುತ್ತಾ ಹುಟ್ಟುತ್ತಾ ಅಣ್ಣತಮ್ಮಂದಿರು, ಬೆಳೀತಾ ಬೆಳೀತಾ ದಾಯಾದಿಗಳು' ಎಂದು ಬಂದಿರಬೇಕು. ಹೆಂಗಸರ ಜಗಳಕ್ಕೆ ರುಕ್ಮಿಣಿ, ಸತ್ಯಭಾಮೆ; ಗಂಗೆ ಗೌರಿ ಬಿಟ್ಟು ಬೇರೆ ಒಳ್ಳೆಯ ಉದಾಹರಣೆ ಬೇಕೇ? ತವರಿನೊಂದಿಗೆ ಜಗಳ ಮಾಡಿಕೊಂಡವಳು ದಕ್ಷ ಪ್ರಜಾಪತಿಯ ಮಗಳು ಸತಿ, ಹಾಗಾಗಿ ದೇವತೆಗಳು ಕೂಡ ಒಂದಿಲ್ಲೊಂದು ವಿಷಯಕ್ಕೆ ಜಗಳ ಮಾಡಿಕೊಳ್ಳುತ್ತಲೇ ಇರುತ್ತಾರೆ ಎಂದಂತಾಯಿತು. ಹೀಗಾಗಿ ಬರೀ ಮನುಷ್ಯರ ಮನೆಯ ದೋಸೆ ಮಾತ್ರ ತೂತಲ್ಲ. ದೇವತೆಗಳ ಮನೆಯ ದೋಸೆಯೂ ತೂತು.

ಇನ್ನು ಕುಟುಂಬದಲ್ಲಿನ ಅತ್ತೆ ಸೊಸೆ ಜಗಳಕ್ಕೆ ಆರಂಭ ಮಾತ್ರ, ಅಂತ್ಯ ಇಲ್ಲ. ಹೆಚ್ಚಾಗಿ ಅದು ಮುಸುಕಿನೊಳಗಿನ ಗುದ್ದಾಟ. ಅತ್ತೆಸೊಸೆ ಜಗಳವಿಲ್ಲದೆ ಸೀರಿಯಲ್ಲುಗಳಿಲ್ಲ. ಇಂಥ ಕತೆಗಳ ಟಿಆರ್‌ಪಿ ಕೂಡ ಹೆಚ್ಚು! 'ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು' ಎಂದಂತೆ ಅತ್ತೆಸೊಸೆ ಜಗಳದಲ್ಲಿ ಬಡವಾಗುವುದು ಮಾತ್ರ ಮನೆಯ ಪುರುಷ. 'ತುತ್ತಾ? ಮುತ್ತಾ?' ಎನ್ನುತ್ತಾ ಅಮ್ಮಾವ್ರ ಗಂಡನಾಗಲೋ ಅಥವಾ ಅಮ್ಮನ ಮುದ್ದಿನ ಮಗನಾಗಲೋ ಎಂದು ಬಾಯಿ ಬಾಯಿ ಬಿಡಬೇಕಷ್ಟೇ.

'ಜಗಳವಿಲ್ಲದ ಬಾಳೊಂದು ಬಾಳೇ?' ಎಂದು ದಿನ ಬೆಳಗಾದರೆ ಕಾಲು ಕೆರೆದು ಜಗಳಕ್ಕಿಳಿಯುವ ನೆರೆಹೊರೆಯವರಿರುತ್ತಾರೆ. 'ನಿಮ್ಮ ಮನೆ ದನ ನಮ್ಮ ಮನೆಯ ಮಲ್ಲಿಗೆ ಬುಡಕ್ಕೆ ಬಾಯಿ ಹಾಕಿತು; ನಿಮ್ಮ ಮನೆ ನಾಯಿ ನಮ್ಮ ಅಂಗಳದಲ್ಲಿ ಉಚ್ಚೆ ಮಾಡಿತು; ನಿಮ್ಮ ಮನೆ ಕಸ ನಮ್ಮನೆಗೆ ಹಾರಿಬಂತು' ಎನ್ನುತ್ತಾ ಜಗಳವಾಡಲು ಕಾಯುತ್ತಿರುತ್ತಾರೆ. ಇತ್ತೀಚೆಗೆ ಪಕ್ಕದ ಮನೆಯವನ ಬೆಕ್ಕು ತನ್ನ ಮನೆಯಲ್ಲಿ ಉಚ್ಚೆ ಹೊಯ್ಯಿತು ಎಂದು ಅದರ ಕಾಲನ್ನು ಮುರಿದನಂತೆ. ಇಂಥ ಪಿಳ್ಳೆನೆವಗಳೂ ಕೆಲವೊಮ್ಮೆ ಗಂಭೀರವಾಗಿ ಹೊಡೆದಾಟ ಬಡಿದಾಟವಾಗಿ ಅಂತ್ಯದಲ್ಲಿ ಇಬ್ಬರ ದೈಹಿಕ ಸ್ಥಿತಿ ಗಂಭೀರವಾಗಿ ಆಸ್ಪತ್ರೆ ಸೇರುವುದರೊಂದಿಗೆ ಜಗಳ ಮುಗಿಯುವುದೋ ಅಥವಾ ಮುಂದುವರಿಯುವುದೋ?

ಇನ್ನು ಈ ಮೊಬೈಲ್ ಯುಗದಲ್ಲಿ ಮಾತಾಡದೆ ಜಗಳವಾಡಬಹುದು, ಇಲ್ಲಿ ಜೋರಾದ ಅರಚಾಟಗಳೂ, ಹೊಡೆದಾಟ ಬಡಿದಾಟಗಳೂ ಇರುವುದಿಲ್ಲ. ಬರೀ ಕಮೆಂಟುಗಳ ಮೂಲಕ ಗುದ್ದಾಡಬಹುದು. ಇದಕ್ಕೆ ಮೌನಪ್ರೇಕ್ಷಕರು ಬಹಳಷ್ಟು ಮಂದಿ. ಇಂಥವರು ಇಬ್ಬರ ಕಮೆಂಟುಗಳನ್ನು ಓದುತ್ತಾ ಮನರಂಜನೆ ಪಡೆದುಕೊಳ್ಳುತ್ತಿರುತ್ತಾರೆ, ಮತ್ತೆ ಕೆಲವರು ನಮಗ್ಯಾಕೆ? ಏನಾದ್ರೂ ಮಾಡಿಕೊಳ್ಳಲಿ ಎಂದು ತಟಸ್ಥ ಭಾವ ತೋರಿದರೂ ಆಗಾಗ ಇಣುಕುತ್ತ ಖುಷಿಪಡುತ್ತಿರುತ್ತಾರೆ. ಕೆಲವರು ಪಕ್ಷಪಾತಿಗಳಾಗಿ 'ನೀವೇ ಹೇಳಿದ್ದು ಸರಿ, ಅವರದ್ದು ತಪ್ಪು' ಎಂದು ಉಬ್ಬಿಸಿ ಉಬ್ಬಿಸಿ ಉರಿವ ಬೆಂಕಿಗೆ ಮತ್ತಷ್ಟು ತುಪ್ಪ ಹಾಕುತ್ತಿರುತ್ತಾರೆ. ಜಗಳದ ಅಂತಿಮ ಹಂತದಲ್ಲಿ ಮಕ್ಕಳು ದೋಸ್ತಿ ಕಟ್ ಮಾಡಿ ಸಮಾಧಾನಪಡುವಂತೆ ಜಾಲತಾಣದಲ್ಲಿ ಬ್ಲಾಕ್ ಮಾಡಿಬಿಟ್ಟರೆ ವರ್ಚುವಲ್ ಜಗಳಕ್ಕೆ ದಿ ಎಂಡ್. ಆದರೆ ಕೆಲವರು ಅಲ್ಲಿಗೇ ಬಿಡದೆ ಮತ್ತೆ ಸಂಬಂಧಪಟ್ಟವರನ್ನು ಟ್ಯಾಗ್ ಮಾಡುತ್ತಾ ಜಗಳದ ಜ್ವಾಲೆ ಆರದಂತೆ ಹೊಣೆ ಹೊತ್ತುಕೊಳ್ಳುತ್ತಾರೆ. ಒಟ್ಟಿನಲ್ಲಿ ಇಂತಹ ಜಗಳಕ್ಕೆ ಗಟ್ಟಿ ಸ್ವರ ಬೇಡ, ಶಬ್ದಗಳ ಹತಾರವೇ ಸಾಕು.

ಮೊದಲೇ ಹೇಳಿದಂತೆ ಒಂದಲ್ಲ ಒಂದು ಕಾರಣಕ್ಕೆ ಪ್ರತಿಯೊಬ್ಬರೂ ಕೋಳಿಗಳಂತೆಯೋ, ಹಾವು ಮುಂಗುಸಿಗಳಂತೆಯೋ ಜಗಳ ಮಾಡಿಕೊಂಡವರೇ. ಡಿವಿಜಿ 'ಮೃಗಶೇಷವಿರುವ ತನಕ ಜಗಳ ತಪ್ಪದು ಜಗದಿ ಎಂದಿದ್ದಾರೆ. ಆದರೆ ಅದು ತರ್ಕಕ್ಕನುಗುಣವಾಗಿ, ನ್ಯಾಯಕ್ಕನುಗುಣವಾಗಿ, ಅನ್ಯಾಯದ ವಿರುದ್ಧವಾಗಿದ್ದರೆ ಅಪೇಕ್ಷಣೀಯ. ಪ್ರತಿಷ್ಠೆಗೋ, ಮೂರ್ಖತನದ್ದೋ, ಅವಿವೇಕತನದ್ದೋ ಆಗಿದ್ದರೆ ಸುಮ್ಮನಿರುವುದು ಒಳ್ಳೆಯದು. ಏನಂತೀರಿ?